(ಸದನವು ಸಂಜೆ 6 ಗಂಟೆ 25 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು)

ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು.

8. ಪ್ರಕಟಣೆ :

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದ ಸಂದೇಶ.

ಅಧ್ಯಕ್ಷರು : ಈಗ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು 2005ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ ಹಾಗೂ ಕರ್ನಾಟಕ ಧನ ವಿನಿಯೋಗ ಸಂಖ್ಯೆ:3, ವಿಧೇಯಕಗಳನ್ನು ಈ ದಿನ 3ನೇ ಆಗಸ್ಟ್ 2005ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

9. ಅಧ್ಯಕ್ಷರ ಅಪ್ಪಣೆ ಮೇರೆಗೆ :

ವಿಷಯ : ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಸ್ಥಳೀಯ ಶಾಸಕರು ಸಮಾರಂಭದ ಅಧ್ಯಕ್ಷತೆ ವಹಿಸಲು ಅವಕಾಶ ಇಲ್ಲದಿರುವ ಬಗ್ಗೆ.

ಶ್ರೀ ಎಂ. ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಒಂದು ನಿವೇದನೆ ಏನೆಂದರೆ ಬಹುಶಃ ನಾವೆಲ್ಲ 224 ಜನ ಜನಪ್ರತಿನಿಧಿಗಳು ಶಾಸಕರಾಗಿದ್ದೇವೆ. ಈ ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ ಏರ್ಪಡಿಸುವ ಸಮಾರಂಭದಲ್ಲಿ, ಮಾನ್ಯ ಶಾಸಕರು ಪ್ರತ್ಯೇಕ ಸಮಾರಂಭ ಏರ್ಪಡಿಸಲು ಮತ್ತು ಸಮಾರಂಭದಲ್ಲಿ ಸ್ಥಳೀಯ ಶಾಸಕರು ಅಧ್ಯಕ್ಷತೆ ವಹಿಸುವಂತೆ ಮಾಡುವ ಬಗ್ಗೆ ಸೂಚನೆ ನೀಡಲು ಸರ್ಕಾರದಲ್ಲಿ ಅವಕಾಶವಿರುವುದಿಲ್ಲ. ಇದಕ್ಕೆ ಒಂದು ಸರ್ಕ್ಯುಲರ್ ಇದ್ದು ಇದರಲ್ಲಿ ಯಾರು ಅಧ್ಯಕ್ಷತೆ ವಹಿಸಬೇಕೆಂದು ಹೇಳಿಲ್ಲ. ನಾನು ಸರ್ಕಾರಿ ನೌಕರರ ಸಂಘದ ಅಧ್ಯಕ್ಷನಾಗಿ ನಾನು ಹೊಗಿ ಅನುಭವಿಸಿದ ಅನುಭವವನ್ನು ಹೇಳುವುದಕ್ಕೆ ಬಯಸುತ್ತೇನೆ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮ್ಯಾಜಿಸ್ಟೇಟ್/ಸಂಬಂಧಪಟ್ಟ ಜಿಲ್ಲಾ ಮಂತ್ರಿಗಳು ಅಂತ ಇದೆ. ಸಬ್‌ಡಿವಿಜನ್‌ನಲ್ಲಿ ಬಂದರೆ ಸಬ್‌ಡಿವಿಷನ್ ಮ್ಯಾಜಿಸ್ಟೇಟ್/ಮಂತ್ರಿಗಳಿದ್ದರೆ ಮಂತ್ರಿಗಳಾಗಬಹುದು, straight away they have gone to surpunch. ಗ್ರಾಮ ಪಂಚಾಯಿತಿಗೆ ಹೋಗಿದ್ದಾರೆ. ಆ ಒಂದು ಸರ್ಕಾರಿ ಆದೇಶದಲ್ಲಿ ತಾಲ್ಲೂಕಿನಲ್ಲಿ ಯಾರು ಅಧ್ಯಕ್ಷತೆಯನ್ನು ವಹಿಸಬೇಕೆಂದು ಎಂದೇನೂ ಹೇಳಿಲ್ಲ. ಆದರೆ ಈ ಒಂದು ಸರ್ಕ್ಯುಲರ್‌ನಲ್ಲಿ ಎಂಎಲ್‌ಎಗಳಿಗೆ ಅಧ್ಯಕ್ಷತೆ ವಹಿಸಲು ಅವಕಾಶವಿರುವು ದಿಲ್ಲವೆಂದು ಹೇಳಿರುವುದು ನಿಜವಾಗಿಯೂ ಈ ಸಭೆಯ ಪ್ರತಿಯೊಬ್ಬ ಶಾಸಕನಿಗೂ ಮಾಡಿದಂತಹ ಅಪಮಾನವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ, ಇದರಲ್ಲಿ ಎರಡನೇ ಕಾಂಪ್ರಮೈಸ್ ಇಲ್ಲ. ದಯಮಾಡಿ ಆ ಸರ್ಕಾರಿ ಆದೇಶವನ್ನು ತರಿಸಿ, ತಾವು ಕೂಡ ಓದಬೇಕೆಂದು ಈ ಸಂದರ್ಭದಲ್ಲಿ ನಿಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಇದಕ್ಕೆ ಒಂದು ಸಲ ತಮ್ಮ ಕಛೇರಿಯಲ್ಲಿ ನಾವು ತೀರ್ಮಾನ ತೆಗೆದುಕೊಂಡಿದ್ದು, ಆ ಫ್ಲಾಗ್ ಆಕ್ಟ್‌ಗೆ ತಿದ್ದುಪಡಿಯನ್ನು ತನ್ನಿ ಎಂದು ಹೇಳಿದ್ದೆವು, ಆದರೆ ಇದುವರೆಗೂ ಆಗಲಿಲ್ಲ, ನಾವು ಫ್ಲಾಗ್